3. ಶ್ರೀ ಚಂದ್ರಶೇಖರ — ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೊಸನಗರ
4. ಶ್ರೀ ಮಾಯಣ್ಣ ಗೌಡ.ಎ.ಹೆಚ್ — ಸಹಾಯಕ ಇಂಜಿನೀಯರ್(ವಿ) (ತಾಂ)ಪ್ರಭಾರ ಹೊಸನಗರ
5. ಶ್ರೀ ಶಂಕರ್ ಕದಮ್ — ಶಾಖಾಧಿಕಾರಿ, ರಿಪ್ಪನ್ ಪೇಟೆ ಶಾಖೆ
6. ಶ್ರೀ ಪ್ರಕಾಶ ತಕ್ಕಣ್ಣನವರ್ — ಶಾಖಾಧಿಕಾರಿ, ನಗರ
7. ಶ್ರೀ ರಾಘವೇಂದ್ರ.ಎಸ್.ಸಿ — ಸಹಾಯಕ ಲೆಕ್ಕಾಧಿಕಾರಿ(ಪ್ರಭಾರ)

ಜನ ಸಂಪರ್ಕ ಸಭೆಗೆ ಆಗಮಿಸಿದ ಗ್ರಾಹಕರು ಮತ್ತು ದೂರಿನ ವಿವರ ಹಾಗೂ ಕೈಗೊಂಡ ಕ್ರಮ.

| ಕ್ರ.ಸಂ | ಜನ ಸಂಪರ್ಕ ಸಭೆಗೆ ಆಗಮಿಸಿದ ಗ್ರಾಹಕರು | ದೂರಿನ ವಿವರ | ದೂರಿಗೆ ಸಂಬಂಧಿಸಿ ಶಾಖೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | ವಿನಾಯಕ ಅರಮನೆ, ಕೆ.ರಾಜೇಶ್ವರಿ, ರಮಾನಂದ, ಮಹೇಶ, ರಾಘವೇಂದ್ರ.ಪಿ. | ಹೊಸನಗರ ತಾಲ್ಲೂಕಿನಲ್ಲಿ 110 ಕೆ.ವಿ ಉಪವಿದ್ಯುತ್ ವಿತರಣಾ ಕೇಂದ್ರ ತೆರೆಯುವ ಬಗ್ಗೆ ಹಾಗೂ ನಲ್ಲುಂಡೆ ಗ್ರಾಮದಲ್ಲಿ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುವ ಬಗ್ಗೆ. ಮತ್ತು ಜಂಗಲ್ ಕಟಿಂಗ್ ಮಾಡುವ ಬಗ್ಗೆ | ಹೊಸನಗರ | ಹೊಸನಗರ ತಾಲ್ಲೂಕಿನಲ್ಲಿ 110 ಕೆ.ವಿ ಉ.ವಿ.ವಿ.ಕೇಂ ಸ್ಥಾಪಿಸಲು ಕೆ.ಪಿ.ಟಿ.ಸಿ.ಎಲ್ ವತಿಯಿಂದ ಅರಣ್ಯ ಅನುಮತಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮತಿ ದೊರೆತ ಕೂಡಲೇ ಟೆಂಡರ್ ಪ್ರಕ್ರಿಯೆ ನಡೆಸಲಾಗುವುದು. ಮತ್ತು ನೆಲ್ಲುಂಡೆ ಗ್ರಾಮದಲ್ಲಿ ಈಗಾಗಲೇ ಜಂಗಲ್ ಕಟಿಂಗ್ ಮಾಡಲಾಗಿರುತ್ತದೆ. ಮತ್ತು ನಿರಂತರ ಹಾಗೂ ಸಮರ್ಪಕ ವಿದ್ಯುತ್ ಸರಬರಾಜು ನೀಡಲು ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗೆ ಸೂಚಿಸಲಾಗಿದೆ. |

| | | | | |
|---|---|---|---|---|
| 2 | ಎಂ.ವಿ.ಜಯರಾಂ, ಕೆ.ಎನ್.ಸ್ವರೂಪ್, ಅಭಿಷೇಕ.ಜೆ, ಪೂರ್ಣೇಶ,ವಿಟ್ಟ | 33 ಕೆ.ವಿ ವಿದ್ಯುತ್ ಮಾರ್ಗ ಪದೇ ಪದೇ ವಿಫಲಗೊಳ್ಳುತ್ತಿರುವ ಬಗ್ಗೆ ಹಾಗೂ ಹೊಸನಗರ ಟೌನ್ ವ್ಯಾಪ್ತಿಗೆ ಎಲ್.ಟಿ ಮಾರ್ಗಕ್ಕೆ ತಾಗಿಕೊಂಡಿರುವ ಮರಗಳ ರೆಂಬೆ ಕೊಂಬೆಗಳನ್ನು ಕಟಾವು ಮಾಡುವ ಬಗ್ಗೆ. | ಹೊಸನಗರ | ಈಗಾಗಲೇ 33 ಕೆ.ವಿ ವಿದ್ಯುತ್ ಮಾರ್ಗದ ಜಂಗಲ್ ಕಟಿಂಗ್ ಮಾಡಲು ಗುತ್ತಿಗೆದಾರರಿಗೆ ಮಾರ್ಗ ಮುಕ್ತತೆಯನ್ನು ನೀಡಲಾಗಿದೆ. ಮತ್ತು 33 ಕೆ.ವಿ ಮಾರ್ಗದ ವಿದ್ಯುತ್ ವಿಫಲತೆಯನ್ನು ಕಡಿಮೆಗೊಳಿಸಲಾಗಿದೆ. ಹೊಸನಗರ ಪಟ್ಟಣ ವ್ಯಾಪ್ತಿಯ ಎಲ್.ಟಿ ವಿದ್ಯುತ್ ಮಾರ್ಗಕ್ಕೆ ತಾಗುತ್ತಿರುವ ಮರದ ರೆಂಬೆಕೊಂಬೆಗಳನ್ನು ಕತ್ತರಿಸಿ ಸಮರ್ಪಕ ಸರಬರಾಜು ಕಲ್ಪಿಸಲಾಗುತ್ತಿದೆ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ
ಮಂವಿಸಕಂ, ಹೊಸನಗರ.

ಪ್ರತಿಗಳು:

1. ಗೌರವಪೂರ್ವಕವಾಗಿ ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ವೃತ್ತ, ಮಂವಿಸಕಂ, ಶಿವಮೊಗ್ಗ ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಗೌರವಪೂರ್ವಕವಾಗಿ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಪಾಲನೆ ಮತ್ತು ನಿರ್ವಹಣೆ ವಿಭಾಗ, ಮಂವಿಸಕಂ, ಸಾಗರ ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಸಹಾಯಕ ಇಂಜಿನೀಯರ್(ವಿ),ತಾಂತ್ರಿಕ .ಶಾಖೆ, ಮಂವಿಸಕಂ, ಹೊಸನಗರ
4. ಶಾಖಾಧಿಕಾರಿ, ನಿ ಮತ್ತು ಪಾ ಶಾಖೆ, ಮಂವಿಸಕಂ, ಹೊಸನಗರ/ನಗರ/ರಿಪ್ಪನ್ ಪೇಟೆ
5. ಸಹಾಯಕ ಲೆಕ್ಕಾಧಿಕಾರಿಗಳು, ಕಂದಾಯ ಶಾಖೆ, ಮಂವಿಸಕಂ, ಹೊಸನಗರ
6. ಕಛೇರಿ ಪ್ರತಿ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನೋಂದಾಯಿತಕಛೇರಿ : ಮೆಸ್ಕಾಂ ಭವನ, ಕಾವೂರು ಕ್ರಾಸ್, ಬಿಜೈ, ಮಂಗಳೂರು-575004.
ಕಾರ್ಪೋರೇಟ್‌ಐಡೆಂಟಿಟಿ ನಂಬರ್ :ಸಿಐಎನ್40109 ಕೆಎ2002 ಎಸ್‌ಜಿಸಿ030425. ವೆಬ್ ಸೈಟ್
ವಿಳಾಸ:www.mescom.karnataka.gov.in

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರ ಕಛೇರಿ,
ಕಾರ್ಯ ಮತ್ತು ಪಾಲನೆ ಸೊರಬ ಉಪವಿಭಾಗ,
ಮೆಸ್ಕಾಂ, ಸೊರಬ
ದೂರವಾಣಿ : 08184-572506
ಇ-ಮೇಲ್ :aeesorab@rediffmail.com

ಕ್ರಮಾಂಕ : ಸಕಾನಿಇಂ(ವಿ)/ಸಇಂ(ತಾಂ)/ಸೊರಬ/23-24/ ದಿನಾಂಕ :

ದಿನಾಂಕ : **29-5-2023** ರಂದು ಬೆಳಗ್ಗೆ **10.30** ಕ್ಕೆ ಸೊರಬ ಉಪವಿಭಾಗೀಯ ಕಛೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

***

ಅಧ್ಯಕ್ಷತೆ : ಶ್ರೀ ಶಶಿಧರ್ ಎಸ್.ಜಿ ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೆಸ್ಕಾಂ, ಶಿವಮೊಗ್ಗ.

ಹಾಜರಿದ್ದ ಅಧಿಕಾರಿಗಳು:

| ಕ್ರ. ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಶಶಿಧರ್ ಎಸ್.ಜಿ | ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾಲನೆ ವೃತ್ತ ಕಛೇರಿ, ಮೆಸ್ಕಾಂ, ಶಿವಮೊಗ್ಗ |
| 2 | ಶ್ರೀ ಸತ್ಯಪ್ರಕಾಶ್ ಎಸ್ | ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಉಪವಿಭಾಗ, ಸೊರಬ |
| 3 | ಶ್ರೀ ಗಿರೀಶ್ ಎಸ್.ಆರ್ | ಸ.ಇಂ(ವಿ)(ತಾಂ), ಮೆಸ್ಕಾಂ, ಸೊರಬ |
| 4 | ಶ್ರೀ ಸತೀಶ್ ಸೊಲ್ಲಾಪುರ | ಸ.ಲೆ.ಅ(ಪ್ರ), ಮೆಸ್ಕಾಂ, ಸೊರಬ |
| 4 | ಶ್ರೀ ಉಮೇಶ್ ಹೆಚ್.ಜಿ | ಸ.ಇಂ(ವಿ), ಮೆಸ್ಕಾಂ, ಸೊರಬ ಶಾಖಾಧಿಕಾರಿ |
| 5 | ಶ್ರೀ ಸುರೇಶ್ ಬಿ.ಕೆ | ಶಾಖಾಧಿಕಾರಿಗಳು ಸೊರಬ |
| 6 | ಶ್ರೀ ಪ್ರತಾಪ್ ಆರ್ | (ಪ್ರಭಾರ) ಶಾಖಾಧಿಕಾರಿಗಳು ಉಳವಿ/ ಚಂದ್ರಗುತ್ತಿ |

ಜನ ಸಂಪರ್ಕ ಸಭೆಗೆ ಆಗಮಿಸಿದ ಗ್ರಾಹಕರು ಮತ್ತು ಸ್ವೀಕರಿಸಿದ ದೂರುಗಳ ವಿವರ ಹಾಗೂ ಕೈಗೊಂಡ ಕ್ರಮದ ವಿವರ:

| ಕ್ರ.ಸಂ | ಗ್ರಾಹಕರ ಹೆಸರು & ವಿಳಾಸ | ದೂರಿನ ವಿವರ | ಶಾಖೆ | ಕೈಗೊಂಡ ಕ್ರಮ |
|---|---|---|---|---|
| 1 | ಶ್ರೀ ವೆಂಕಪ್ಪ, ಶ್ರೀ ಪರಶುರಾಮಪ್ಪ, ಭೋಜಪ್ಪ, ಲಕ್ಷ್ಮಣಪ್ಪ ಕಪ್ಪಗಳಲೆ, ಉಳವಿ | ಸುಟ್ಟು ಹೋಗಿರುವ ಪರಿವರ್ತಕವನ್ನು ಬದಲಾಯಿಸುವಂತೆ ಕೋರಿ ಮನವಿ ಕುರಿತು. | ಉಳವಿ | ಪರಿವರ್ತಕವನ್ನು ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 2 | ಶ್ರೀ ಉಮೇಶ್ ಗೌಡ್ರು ಹಾರೇಕೊಪ್ಪ ಸೊರಬ | ಅಕ್ರಮ-ಸಕ್ರಮದ ಮಾಹಿತಿ ಬಗ್ಗೆ. | ಸೊರಬ | ಹಾಲಿ ನೀಡಿರುವ ಅನುದಾನ ಖಾಲಿಯಾಗಿದ್ದು, ಮುಂದಿನ ಅನುದಾನದಲ್ಲಿ ಕಾಮಗಾರಿ ನಿರ್ವಹಿಸಲಾಗುವುದು ಎಂಬ ಮಾಹಿತಿ ನೀಡಲಾಯಿತು. |

| | | | | |
|---|---|---|---|---|
| 3 | ಶ್ರೀ ಕೃಷ್ಣಮೂರ್ತಿ ನಾಡಿಗ್, ಯಲಸಿ ಸೊರಬ | ಪರಿವರ್ತಕ ಕೇಂದ್ರವನ್ನು ಸ್ಥಳಾಂತರ ಮಾಡುವಂತೆ ಕೋರಿ ಕುರಿತು. | | ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಯಿತು. |
| 4 | ಸಲೀಂ/ರಾಮಣ್ಣ/ಪಾಂಡು ವಿದ್ಯುತ್ ಗುತ್ತಿಗೆದಾರರು, ಸೊರಬ | ಸೊರಬ ಉಪ ವಿಭಾಗೀಯ ಕಛೇರಿಯಲ್ಲಿನ ಲಾರಿಗೆ ಡ್ರೈವರ್ ವ್ಯವಸ್ಥೆ ಮಾಡುವಂತೆ ಕೋರಿರುವ ಕುರಿತು | ಸೊರಬ | ಶೀಘ್ರದಲ್ಲಿ ವ್ಯವಸ್ಥೆ ಮಾಡಲಾಗುವುದು ಎಂಬ ಮಾಹಿತಿಯನ್ನು ಒದಗಿಸಲಾಯಿತು. |

ಮುಂದುವರೆದು, ಸೊರಬ ಉಪವಿಭಾಗದ ಎಲ್ಲಾ ಶಾಖಾಧಿಕಾರಿಗಳಿಗೆ ತಮ್ಮ ತಮ್ಮ ಶಾಖಾ ವ್ಯಾಪ್ತಿಯಲ್ಲಿ ವಿಫಲವಾದ ಪರಿವರ್ತಕಗಳನ್ನು ಕೂಡಲೇ ಬದಲಾಯಿಸುವುದು, ವಿದ್ಯುತ್ ಅಡಚಣೆಗಳನ್ನು ಕ್ಲಪ್ತ ಸಮಯದಲ್ಲಿ ಸರಿಪಡಿಸುವುದು, ಹಾಗೂ ಇತರೇ ವಿದ್ಯುತ್ ಸಂಬಂಧಿತ ದೂರುಗಳನ್ನು ಸಕಾಲದಲ್ಲಿ ನಿರ್ವಹಿಸಲು ಸೂಚಿಸಿ ವಂದನೆಗಳೊಂದಿಗೆ ಜನ ಸಂಪರ್ಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪ್ರ),
ಕಾರ್ಯ ಮತ್ತು ಪಾಲನೆ ಉಪವಿಭಾಗ,
ಮೆಸ್ಕಾಂ., ಸೊರಬ.

ಪ್ರತಿಯನ್ನು ಗೌರವಪೂರ್ವಕವಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಮವಿಸಕಂನಿ, ಸಾಗರ ರವರ ಅವಗಾಹನೆಗೆ ಸಲ್ಲಿಸಲಾಗಿದೆ.

ಪ್ರತಿಗಳು:

1. ಶಾಖಾಧಿಕಾರಿ, ಕಾ ಮತ್ತು ಪಾ ಸೊರಬ/ಉಳವಿ/ಚಂದ್ರಗುತ್ತಿ ಶಾಖೆ, ಮೆಸ್ಕಾಂ, ಸೊರಬ ರವರ ಮಾಹಿತಿಗೆ.
2. ಕಛೇರಿ ಕಡತಕ್ಕೆ.

ಮೆಸ್ಕಾಂ
MESCOM
# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ ದೂರವಾಣಿ :08186-244238
ಕಾರ್ಯ ಮತ್ತು ಪಾಲನೆ ಉಪವಿಭಾಗ
ಜೋಗ-577435 ಇ-ಮೇಲ್ :aeemescomjog@rediffimail.com

ಕ್ರಮಾಂಕ: ಸಕಾನಿಇಂ(ವಿ)/ಸ.ಇಂ(ತಾಂ)/ಜೋಗ/760-64 ದಿನಾಂಕ :30-6-23

ದಿನಾಂಕ: 21.06.2023 ರಂದು ಬೆಳಗ್ಗೆ 11:00 ಗಂಟೆಗೆ ತಲವಾಟ ಗ್ರಾಮ ಪಂಚಾಯತ್ ಸಂಭಾಂಗಣದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಶಿವಮೊಗ್ಗ ವೃತ್ತ ಇವರ ಅಧ್ಯಕ್ಷತೆಯಲ್ಲಿ ನಡೆಸಲಾದ ಜನ ಸಂಪರ್ಕ ಸಭೆಯ ನಡಾವಳಿಗಳು.
ಸಭೆಯಲ್ಲಿ ಹಾಜರಿದ್ದವರು:

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಶಶಿಧರ್ ಜಿ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಶಿವಮೊಗ್ಗ ವೃತ್ತ |
| 2 | ಶ್ರೀ ಪ್ರವೀಣ ಪಿ | ಸಕಾನಿಇಂ(ವಿ) (ಪ್ರಭಾರ) ಉಪವಿಭಾಗ ಜೋಗ |
| 3 | ಶ್ರೀ ಅಣ್ಣಪ್ಪ ಮಂಜುನಾಥ ನಾಯ್ಕ | ಸಹಾಯಕ ಲೆಕ್ಕಾಧಿಕಾರಿ, ಉಪವಿಭಾಗ ಜೋಗ |
| 4 | ಶ್ರೀ ಯಶವಂತ್ ಜೈನ್ | ಕಿರಿಯ ಇಂಜಿನಿಯರ್(ವಿ), ಜೋಗ |
| 5 | ಶ್ರೀ ಸಂತೋಶ್ ಕುಮಾರ್ | ಕಿರಿಯ ಇಂಜಿನಿಯರ್(ವಿ), ತಾಳಗುಪ್ಪ |
| 6 | ಶ್ರೀಮತಿ ಕಲ್ಪನಾ | ಅಧ್ಯಕ್ಷರು, ಗ್ರಾಮ ಪಂಚಾಯತ್, ತಲವಾಟ |
| 7 | ಶ್ರೀ ಪ್ರಸನ್ನ ಡಿ.ಎನ್ | ಗ್ರಾಮ ಪಂಚಾಯತ್ ಸದಸ್ಯರು, ತಲವಾಟ |
| 8 | ಶ್ರೀ ಕನ್ನಪ್ಪ ಎಂ.ಆರ್ | ಗ್ರಾಮ ಪಂಚಾಯತ್ ಸದಸ್ಯರು, ತಲವಾಟ |
| 9 | ಶ್ರೀ ಬಾಲಚಂದ್ರ | ಗ್ರಾ.ಪಂ ಕಾರ್ಯದರ್ಶಿ |
| 10 | ಶ್ರೀಮತಿ ದೇವಕಿ ಬಿ | ಗ್ರಾಮ ಪಂಚಾಯತ್ ಸದಸ್ಯರು, ತಲವಾಟ |
| 11 | ಶ್ರೀ ಅನಿಲ್ ಕುಮಾರ್ | ಗ್ರಾಮ ಪಂಚಾಯತ್ ಅಧ್ಯಕ್ಷರು, ಶಿರವಂತೆ |
| 12 | ಶ್ರೀ ಶ್ರೀಧರ್ ಉಳಿಗೆರೆ | ಗ್ರಾಹಕರು |
| 13 | ಶ್ರೀ ಎಸ್.ಎಸ್ ಭಟ್ | ಗ್ರಾಹಕರು |
| 14 | ಶ್ರೀ ನಾರಾಯಣ ಗೌಡ | ಗ್ರಾಹಕರು |
| 15 | ಶ್ರೀ ಶ್ರೀಧರ್ ಹೆಚ್.ಕೆ | ಗ್ರಾಹಕರು |
| 16 | ಶ್ರೀ ರಾಹುಲ್ ಎಂ.ಎಸ್ | ಗ್ರಾಹಕರು |
| 17 | ಶ್ರೀ ಮಧುಕುಮಾರ್ ಎಂ.ಎಸ್ | ಗ್ರಾಹಕರು |
| 18 | ಶ್ರೀ ಸುರೇಶ್ | ಗ್ರಾಹಕರು |
| 19 | ಶ್ರೀ ಮಂಜುನಾಥ್ | ಗ್ರಾಹಕರು |
| 20 | ಶ್ರೀ ಕಮಲಾಕರ | ಗ್ರಾಹಕರು |
| 21 | ಶ್ರೀ ವಿಜಯಕುಮಾರ್ | ಗ್ರಾಹಕರು |
| 22 | ಶ್ರೀ ಕೆ.ಆರ್ ವೆಂಕಟಾಚಲ | ಗ್ರಾಹಕರು |
| 23 | ಶ್ರೀಮತಿ ರಂಜಿತಾ | ಗ್ರಾಹಕರು |
| 24 | ಶ್ರೀ ಪ್ರೇಮ್ | ಗ್ರಾಹಕರು |

ಉಪವಿಭಾಗದ ಜನ ಸಂಪರ್ಕ ಸಭೆಗೆ ಮಾನ್ಯ ಶ್ರೀ ಶಶೀಧರ್ ಜಿ, ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ., ರವರು ಅಧ್ಯಕ್ಷತೆಯನ್ನು ವಹಿಸಿದ್ದು, ಸದರಿಯವರಿಗೆ ಹಾಗೂ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳು/ನೌಕರರಿಗೆ ಹಾಗೂ ಗ್ರಾಹಕರಿಗೆ ಎಲ್ಲಾ ಅಧಿಕಾರಿ/ನೌಕರರ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪ್ರಭಾರ), ಜೋಗರವರು ಸ್ವಾಗತವನ್ನು ಕೋರಿದರು.

**ಚರ್ಚಿಸಿದ ವಿಷಯಗಳು:**

1. ಶ್ರೀ ಎಸ್.ಎಸ್ ಭಟ್ ರವರು ಮಾತನಾಡಿ ಅಜ್ಜನ ಹೆಸರಿನಲ್ಲಿರುವ ಮೀಟರ್‌ನ್ನು ಮೊಮ್ಮಗನ ಹೆಸರಿಗೆ ಹಾಗೂ ಖರೀದಿ ಮಾಡಿದ ಆಸ್ತಿಯ ಹೆಸರು ಬದಲಾವಣೆಗೆ ಸಂಬಂಧಿಸಿದಂತೆ ನೀಡಬೇಕಾದ ದಾಖಲೆಗಳು ಹಾಗೂ ಹೆಸರು ಬದಲಾವಣೆಯ ಪ್ರಕ್ರಿಯೆಯ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ಕೋರಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಜೋಗ ಉಪವಿಭಾಗ ರವರು ಆಸ್ತಿ ಖರೀದಿ ಹಾಗೂ ಮರಣ ಹೊಂದಿದ ಪ್ರಕರಣಗಳ ಹೆಸರು ಬದಲಾವಣೆಗೆ ಅಗತ್ಯವಾಗಿ ಎಲ್ಲಾ ದಾಖಲಾತಿಗಳು ಹಾಗೂ ಪ್ರಕ್ರಿಯೆಯ ಬಗ್ಗೆ ಸವಿವರವಾಗಿ ಸಭೆಗೆ ವಿವರಿಸಿದರು.

2. ಗೃಹ ಜ್ಯೋತಿ ಅರ್ಜಿ ಸಲ್ಲಿಕೆಯ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ರವರು ಮಾತನಾಡಿ 200 ಯೂನಿಟ್ ಒಳಗೆ ಬಳಕೆ ಮಾಡುತ್ತಿರುವ ರಾಜ್ಯದ ಎಲ್ಲಾ ಗೃಹ ಬಳಕೆ ವಿದ್ಯುತ್ ಗ್ರಾಹಕರಿಗೆ 200 ಯೂನಿಟ್ ವರೆಗೆ ವಿದ್ಯುತ್ ಉಚಿತವಾಗಿ ಒದಗಿಸಲು ಅರ್ಜಿ ಸಲ್ಲಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು ಗ್ರಾಮ ಪಂಚಾಯತ್, ನಾಡಕಛೇರಿ, ಪಟ್ಟಣ ಪಂಚಾಯತ್, ಗ್ರಾಮ ಒನ್, ಕರ್ನಾಟಕ ಒನ್, ಮೆಸ್ಕಾಂ ಕಛೇರಿಗಳಲ್ಲಿ ಅಥವಾ ಗ್ರಾಹಕರು ತಾವೇ ಅರ್ಜಿ ನೋಂದಾಯಿಸಲು ಅವಕಾಶವಿದ್ದು ಅರ್ಜಿ ಸಲ್ಲಿಸುವಂತೆ ಸಭೆಯಲ್ಲಿ ತಿಳಿಸಿದರು

2. ಶ್ರೀ ವೆಂಕಟಾಚಲರವರು ಮಾತನಾಡಿ ನಿಗದಿತ ಶುಲ್ಕವನ್ನು ವಿಪರೀತವಾಗಿ ಹೆಚ್ಚಳ ಮಾಡಿರುವ ಬಗ್ಗೆ ಸಭೆಯಲ್ಲಿ ಆಕ್ಷೇಪಿಸಿದರು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಪ್ರತಿ ವರ್ಷ ಗೌರವಾನ್ವಿತ ಕೆ.ಇ.ಆರ್.ಸಿ ಯು ಸಾರ್ವಜನಿಕರ ಅಹವಾಲುಗಳನ್ನು ಪರಿಗಣಿಸಿ ಕಾಲ ಕಾಲಕ್ಕೆ ಪತ್ರಿಕಾ ಪ್ರಕಟಣೆ ಹೊರಡಿಸಿದ ನಂತರವೇ ದರ ಹೆಚ್ಚಳ ಮಾಡುತ್ತಿದ್ದು, ಸಾರ್ವಜನಿಕ ಅಹವಾಲು ಸ್ವೀಕರಿಸುವ ಸಮಯದಲ್ಲಿ ಆನ್‌ಲೈನ್ ಮೂಲಕ ಕೂಡ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದ್ದು ಮುಂಬರುವ ದಿನಗಳಲ್ಲಿ ಸದುಪಯೋಗಪಡಿಸಿಕೊಳ್ಳುವಂತೆ ಸಭೆಗೆ ತಿಳಿಸಿರುತ್ತಾರೆ.

3. ಶ್ರೀ ಲಕ್ಷ್ಮಿನಾರಾಯಣ್ ರವರು ಮಾತನಾಡಿ ಕಳೆದ ವರ್ಷದ ಹಾಗೂ ಪ್ರಸ್ತುತ ವರ್ಷದ ಗೃಹ ಬಳಕೆಗೆ ಸಂಬಂಧಿಸಿದ ಜಕಾತಿಯ ದರದ ಸ್ಲಾಬ್ ವಿವರಗಳನ್ನು ತಿಳಿಸುವಂತೆ ಸಭೆಯಲ್ಲಿ ಕೋರಿದರು.

ಉಪವಿಭಾಗದ ಸಹಾಯಕ ಲೆಕ್ಕಾಧಿಕಾರಿಗಳು ಕಳೆದ ವರ್ಷದ ಹಾಗೂ ಪ್ರಸ್ತುತ ವರ್ಷದ ಗೃಹ ಬಳಕೆಗೆ ಸಂಬಂಧಿಸಿದ ಜಕಾತಿಯ ದರದ ಸ್ಲಾಬ್ ವಿವರಗಳನ್ನು ವಿವರಿಸಿದರು.

4. ಶ್ರೀ ಅನಿಲ್ ಗೌಡ, ಅಧ್ಯಕ್ಷರು ಗ್ರಾಮ ಪಂಚಾಯತ್ ರವರು ಮಾತನಾಡಿ 1978 ರಲ್ಲಿ ಹಾಕಿರುವ ಲೈನ್ ಗಳೇ ಈಗಲೂ ಇದ್ದು ತಕ್ಷಣ ಹಳೆಯ ಲೈನಗಳನ್ನು ಹೊಸ ಲೈನ್‌ಗಳೊಂದಿಗೆ ಬದಲಾಯಿಸುವಂತೆ ಸಭೆಯಲ್ಲಿ ಕೋರಿದರು.

ಶಾಖಾಧಿಕಾರಿಗಳು ತಾಳಗುಪ್ಪರವರು ಮಾತನಾಡಿ ಈಗಾಗಲೇ 1.43 ಕೋಟಿ ಮೊತ್ತದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಶೀಘ್ರದಲ್ಲೇ ಗುತ್ತಿಗೆದಾರರಿಗೆ ಕಾಮಗಾರಿ ಪ್ರಾರಂಭಗೊಳಿಸಲು ಸೂಚಿಸಲಾಗುವುದೆಂದು ತಿಳಿಸಿರುತ್ತಾರೆ. ಅಲ್ಲದೇ 1.05 ಕೋಟಿ ಮೊತ್ತದ ವಾಹಕ ಬದಲಾವಣೆಯ ಡಿ.ಪಿ.ಆರ್ ಸಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ.

5 ಶ್ರೀ ಪ್ರಸನ್ನ ಕೊಳಚಗಾರು, ಸದಸ್ಯರು ಗ್ರಾಮ ಪಂಚಾಯತಿರವರು ಮಾತನಾಡಿ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಜೆಟ್ ಇಲ್ಲದಿರುವುದಾಗಿ ಅಥವಾ ಕಡಿಮೆ ಇರುವುದಾಗಿ ಮೆಸ್ಕಾಂ ಇಂಜಿನಿಯರ್ ಗಳು ತಿಳಿಸುತ್ತಿದ್ದು ಕೂಡಲೇ ಈ ಬಗ್ಗೆ ಗಮನಹರಿಸಿ ಹೆಚ್ಚಿನ ಬಜೆಟ್ ಬಿಡುಗಡೆಗೊಳಿಸುವಂತೆ ಸಭೆಯಲ್ಲಿ ಕೋರಿರುತ್ತಾರೆ.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಆದ್ಯತೆ ಮೇರೆಗೆ ಬಜೆಟ್ ಬಿಡುಗೊಳಿಸುವುದಾಗಿ ಹಾಗೂ ಮುಂದಿನ ದಿನಗಳಲ್ಲಿ ಅಗತ್ಯ ಬಜೆಟ್ ಕೋರಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಕಾನಿಇಂ(ವಿ) ರವರಿಗೆ ಸೂಚಿಸಿದರು.

6. ಶ್ರೀ ಕನ್ನಪ್ಪ ಗ್ರಾಮ ಪಂಚಾಯತ್ ಸದಸ್ಯರು ಮಾತನಾಡಿ ಮಂಜಿನಕಾನು ಗ್ರಾಮದಲ್ಲಿ ರಸ್ತೆಯ ಮಧ್ಯದಲ್ಲಿ ವಿದ್ಯುತ್ ಕಂಬವಿದ್ದು ತಕ್ಷಣ ಕಂಬವನನ್ನು ಸ್ಥಳಾಂತರುಸುವಂತೆ ಸಭೆಯಲ್ಲಿ ಕೋರಿರುತ್ತಾರೆ.

ಶಾಖಾಧಿಕಾರಿಗಳು ತಾಳಗುಪ್ಪರವರು ಮಾತನಾಡಿ ಈ ಬಗ್ಗೆ ಸ್ಥಳ ಪರಿಶಿಲಸಿ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

7. ಶ್ರೀಮತಿ ದೇವಕಿ ರವರು ಮಾತನಾಡಿ ಹೊಸ ತಲವಾಟದಲ್ಲಿ ಬೇಸಿಗೆಯಲ್ಲಿ ಪ್ರತಿ ವರ್ಷ ಟಿ.ಸಿ ಹಾಳಾಗುತ್ತಿದ್ದು, 3 ವರ್ಷದಿಂದ ಬೆಳೆಗಳು ಹಾಳಾಗುತ್ತುರುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅ.ಇಂ(ವಿ) ರವರು ಈ ಬಗ್ಗೆ ಪರಿಶೀಲಿಸಿ ಎಸ್.ಸಿ.ಪಿ/ಟಿ.ಎಸ್.ಪಿ ಯಲ್ಲಿ ಬರುವ ಅನುದಾನದಡಿ ಅಥವಾ ಸಿಸ್ಟಮ್ ಇಂಪ್ರೂಮೆಂಟ್ ಅಡಿಯಲ್ಲಿ ಹೆಚ್ಚುವರಿ ಸಾಮರ್ಥ್ಯದ ಪರಿವರ್ತಕವನ್ನು ಅಳವಡಿಸುವಂತೆ ಶಾಖಾಧಿಕಾರಿಗಳಿಗೆ ತಿಳಿಸಿದರು.

8. ಶ್ರೀ ಅಣ್ಣಪ್ಪ, ಗುತ್ತಿಗೆದಾರರು ತಾಳಗುಪ್ಪ ರವರ ಮನೆ ಮೇಲೆ ಲೈನ್ ಹೋಗಿದ್ದು ಶಿಫ್ಟಿಂಗ್ ಮಾಡಿಕೊಡಲು ತಿಳಿಸಿರುತ್ತಾರೆ.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಹಣ ಪಾವತಿಸಿ ಲೈನ್ ಸ್ಥಳಾಂತರಿಸಿಕೊಳ್ಳಲು ಗ್ರಾಹಕರಿಗೆ ಸೂಚಿಸಿರುತ್ತಾರೆ.

9. ಶಿರವಂತೆ ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಮಾತನಾಡಿ ಹೊಸಕೊಪ್ಪದಲ್ಲಿ ಪರಿವರ್ತಕ ಅಳವಡಿಸಲಾಗಿದ್ದು ಬಳಕೆ ಆಗಿರುವುದಿಲ್ಲ. ಆದರೆ ಪರಿವರ್ತಕ ಹಾಳಾಗಿರುತ್ತದೆ, ಬಲೆಗಾರುವಿನಲ್ಲಿ 2015 ರಲ್ಲಿ ಅಕ್ರಮ ಸಕ್ರಮದಡಿಯಲ್ಲಿ ಹಣ ಪಾವತಿಸಿದ್ದು ಇದುವರೆಗೂ ಕಾಮಗಾರಿ ಆಗಿಲ್ಲದಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ) ರವರು ಮಾತನಾಡಿ ಇಂದು ಸಾಯಂಕಾಲದೊಳಗಾಗಿ ಸ್ಥಳ ಪರಿಶೀಲಿಸಿ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಹಾಗೂ ಸಕಾನಿಇಂ(ವಿ) ರವರಿಗೆ ಸೂಚಿಸಿದರು. ಬಲೆಗಾರುವಿನಲ್ಲಿ 2015 ರಲ್ಲಿ ಪಾವತಿಸಿದ ಅಕ್ರಮ ಸಕ್ರಮ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲು ಡಿ.ಪಿ.ಆರ್ ಸಲ್ಲಿಸಲಾಗಿರುತ್ತದೆ ಎಂದು ಸಭೆಯಲ್ಲಿ ಶಾಖಾಧಿಕಾರಿಗಳು ತಿಳಿಸಿರುತ್ತಾರೆ.

10. ಶ್ರೀ ಲಕ್ಷ್ಮಿನಾರಾಯಣ್ ರವರು ಮಾತನಾಡಿ ಅನಧಿಕೃತ ಸ್ಥಳಗಳಲ್ಲಿ, ಅರಣ್ಯ ಭೂಮಿಯಲ್ಲಿ ಭಾವಿ ಹಾಗೂ ಬೋರ್ ಗಳಿಗೆ ವಿದ್ಯುತ್ ಸಂಪರ್ಕ ನೀಡದಂತೆ ಸಭೆಯಲ್ಲಿ ಕೋರಿದರು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿ ತಾಳಗುಪ್ಪ ಹಾಗೂ ಸಕಾನಿಇಂ(ವಿ) ರವರಿಗೆ ಸ್ಥಳ ಪರಿಶೀಲಿಸಿ ಜಿ.ಪಿ.ಎಸ್ ಸಂಯೋಜನೆ ಮಾಡಿ ದಿಶಾಂಕ್ ತಂತ್ರಾಂಶದಲ್ಲಿ ಖಚಿತಪಡಿಸಿಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

11. ತಲವಾಟ ಪಂಚಾಯತ್ ಸೆಕ್ರೆಟರಿರವರು ಮಾತನಾಡಿ ರಸ್ತೆ ಬದಿಯಲ್ಲಿರುವ ಕಂಬವನ್ನು ಸ್ಥಳಾಂತರಿಸುವಂತೆ ಸಭೆಯಲ್ಲಿ ಕೋರಿರುತ್ತಾರೆ.ಜೆಜೆಎಮ್ ಕುಡಿಯುವ ನೀರಿಗೆ ವಿದ್ಯುತ್ ಸಂಪರ್ಕ ನೀಡುವ ಬಗ್ಗೆ ಹಾಗೂ ಸೋಲಾರ್ ಅಳವಡಿಸಲಾಗಿದ್ದು ಮುಂದಿನ ಪ್ರಕ್ರಿಯೆಯ ಬಗ್ಗೆ ಸಭೆಯಲ್ಲಿ ಮನವಿ ಮಾಡಿದರು.
ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಸೋಲಾರ್ ರೂಫ್‌ಟಾಫ್ ಅಡಿಯಲ್ಲಿ ಮೆಸ್ಕಾಂನೊಂದಿಗೆ Power Purchase Agreement ಮಾಡಿಕೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

12. ಶ್ರೀ ಲಕ್ಷ್ಮಿನಾರಾಯಣ್ ರವರು ಮಾತನಾಡಿ 3 ರಿಂದ 4 ತಿಂಗಳಿನಿಂದ ನಿರಂತರವಾಗಿ ವಿದ್ಯುತ್ ವ್ಯತ್ಯಯವಾಗಿದ್ದು, ಈ ಬಗ್ಗೆ ಕೂಡಲೇ ಮೆಸ್ಕಾಂಗೆ ತಿಳಿಸಲಾಗಿದ್ದು ತ್ವರಿತವಾಗಿ ಮೆಸ್ಕಾಂ ಸಿಬ್ಬಂದಿಗಳು ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಿರುತ್ತಾರೆ. ಪ್ರಸ್ತುತ ಯಾವುದೇ ಸಮಸ್ಯೆಗಳು ಉಂಟಾಗುತ್ತಿಲ್ಲವೆಂದು ಸಭೆಯಲ್ಲಿ ತಿಳಸಿದರು.
ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಗ್ರಾಹಕರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಗುಣಮಟ್ಟದ ಸೇವೆ ಒದಗಿಸುವಂತೆ ಜೋಗ ಉಪವಿಭಾಗ ವ್ಯಾಪ್ತಿಯ ಎಲ್ಲಾ ಅಧಿಕಾರಿ/ನೌಕರರಿಗೆ ಸೂಚಿಸಿದರು.

13. ಶ್ರೀ ಲಕ್ಷ್ಮಿನಾರಾಯಣ್ ರವರು ಮಾತನಾಡಿ ವಿದ್ಯುತ್ ಕಂಬ ವಾಲಿದ್ದು, ಸರಿಪಡಿಸುವಂತೆ ಲೈನ್ ಮ್ಯಾನ್ ಗೆ ತಿಳಿಸಲಾಗಿದ್ದರೂ ಸಹ ಇದುವರೆಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಸಭೆಗೆ ತಿಳಿಸಿದರು.
ಅಧೀಕ್ಷಕ ಇಂಜಿನಿಯರ್(ವಿ)ರವರು ಮಾತನಾಡಿ ಶೀಘ್ರವಾಗಿ ಸಮಸ್ಯೆ ಬಗೆಹರಿಸಿಕೊಡುವಂತೆ ಶಾಖಾಧಿಕಾರಿಗಳು ತಾಳಗುಪ್ಪ ರವರಿಗೆ ಸೂಚಿಸಿದರು.

14. ವಿದ್ಯುತ್ ಬಿಲ್ ಅನ್ನು ಆನ್ ಲೈನ್ ಪಾವತಿ ಮಾಡಲು ಅಇಂ(ವಿ) ರವರು ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಗೆ ಮನವಿ ಮಾಡಿದರು. 'ನನ್ನ ಮೆಸ್ಕಾಂ' ತಂತ್ರಾಂಶದ ಮೂಲಕ ವಿದ್ಯುತ್ ಬಿಲ್ ಪಾವತಿಯ ವಿಧಾನವನ್ನು ಸಭೆಗೆ ವಿವರಿಸುವಂತೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.
ಸಹಾಯಕ ಲೆಕ್ಕಾಧಿಕಾರಿ ಜೋಗರವರು 'ನನ್ನ ಮೆಸ್ಕಾಂ' ತಂತ್ರಾಂಶದ ಮೂಲಕ ಪಾವತಿ ಮಾಡುವ ವಿಧಾನವನ್ನು ಸಭೆಗೆ ಪ್ರಾತ್ಯಕ್ಷಿಕವಾಗಿ ವಿವರಿಸಿದರು.

15. ಶ್ರೀ ಮಧುಕುಮಾರ್ ರವರು ಮಾತನಾಡಿ ಮನೆಯ ಹತ್ತಿರ ಲೈನ್ ಅಲ್ಲಾಡುತ್ತಿದ್ದು ಮನೆಯ ಹಿತ್ತಲಿನಿಂದ ಬೇರೆ ಕಡೆಗೆ ಲೈನ್ ಶಿಫ್ಟ್ ಮಾಡುವಂತೆ ಸಭೆಯಲ್ಲಿ ಕೋರಿರುತ್ತಾರೆ..
ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಹಣ ಪಾವತಿಸಿ ಲೈನ್ ಸ್ಥಳಾಂತರಿಸಿಕೊಳ್ಳಲು ಗ್ರಾಹಕರಿಗೆ ಸೂಚಿಸಿರುತ್ತಾರೆ.

16. ಶ್ರೀ ರಾಹುಲ್ ರವರು ಮಾತನಾಡಿ ಮನೆಯ ಹತ್ತಿರ ಲೈನ್ ಅಪಾಯಕಾರಿಯಾಗಿದ್ದು ಮನೆಯ ಹಿತ್ತಲಿನಿಂದ ಬೇರೆ ಕಡೆಗೆ ಲೈನ್ ಶಿಫ್ಟ್ ಮಾಡುವಂತೆ ಸಭೆಯಲ್ಲಿ ಕೋರಿರುತ್ತಾರೆ..
ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಹಣ ಪಾವತಿಸಿ ಲೈನ್ ಸ್ಥಳಾಂತರಿಸಿಕೊಳ್ಳಲು ಗ್ರಾಹಕರಿಗೆ ಸೂಚಿಸಿರುತ್ತಾರೆ.

17. ಶ್ರೀ ಶ್ರೀಧರ್ ಹೆಗಡೆರವರು ಮಾತನಾಡಿ ವಿದ್ಯುತ್ ಕಂಬವನ್ನು ಆಳದಲ್ಲಿ ನೆಡದೇ ಇರುವುದರಿಂದ ಮಳಗಾಲದಲ್ಲಿ ಕಂಬಗಳು ವಾಲುತ್ತಿರುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು ವಿದ್ಯುತ್ ಬಿಲ್ಲುಗಳನ್ನು ಕನ್ನಡದಲ್ಲಿ ಮುದ್ರಿಸಿ ವಿತರಿಸಲು ಸಭೆಯಲ್ಲಿ ಕೋರಿದರು.
ಮಾನ್ಯ ಅ.ಇಂ (ವಿ) ರವರು ಮಾತನಾಡಿ ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸಕಾನಿಇಂ(ವಿ), ಜೋಗ ಉಪವಿಭಾಗ ಹಾಗೂ ಶಾಖಾಧಿಕಾರಿಗಳು, ತಾಳಗುಪ್ಪ ರವರಿಗೆ ಸೂಚಿಸಿದರು.
ವಂದನೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಮವಿಸಕಂ, ಉಪವಿಭಾಗ ಜೋಗ.

ಪ್ರತಿಗಳು:
1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಮವಿಸಕಂ., ಕಾರ್ಯ ಮತ್ತು ಪಾಲನೆ ವೃತ್ತ, ಶಿವಮೊಗ್ಗ ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮವಿಸಕಂ., ಕಾರ್ಯ ಮತ್ತು ಪಾಲನೆ ವಿಭಾಗ, ಸಾಗರ ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
3. ಕಿರಿಯ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ಶಾಖೆ, ಮವಿಸಕಂ, ಜೋಗ/ತಾಳಗುಪ್ಪ/ಬ್ಯಾಕೋಡ್-ರವರಿಗೆ ಮೇಲಿನ ವಿಷಯಗಳ ಕುರಿತು ನಿಯಾಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
4. ಕಪ್ರ/ಮುಕ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಮೆಸ್ಕಾಂ
MESCOM

ನೋಂದಾಯಿತಕಛೇರಿ
'ಮೆಸ್ಕಾಂ ಭವನ, ಕಾವೂರು ಅಡ್ಡ ರಸ್ತೆ, ಬಜ್ಪೆ,'
ಮಂಗಳೂರು-575004
**Corporate Identity Number:**
**(CIN)U40109 KA 2002 SGC 030425**

ಸಹಾಯಕ ಕಾರ್ಯನಿರ್ವಾಹಕಇಂಜನಿಯರ್(ವಿ)
ಕಾ ಮತ್ತು ಪಾ. ಉಪವಿಭಾಗ ಶಿಕಾರಿಪುರ.
ದೂರವಾಣಿ ಸಂಖ್ಯೆ: 08187-223240
**E-Mail ID:aeeshikaripura@rediffmail.com**
**Web add:www.mesco.in**


ನಂ: ಸ.ಕಾ.ನಿ.ಇಂ(ವಿ)/ಶಿಕಾರಿಪುರ/2022-23/ 2983-89 ದಿನಾಂಕ: 28-06-2023

## :: ಜನಸಂಪರ್ಕ ಸಭೆಯ ನಡಾವಳಿ ::

ದಿನಾಂಕ: 23-06-2023 ರಂದು ಬೆಳಗ್ಗೆ 11-00 ಕ್ಕೆ ಶಿಕಾರಿಪುರ ಉಪವಿಭಾಗ ಕಛೇರಿಯಲ್ಲಿ ಗ್ರಾಹಕರ ಕುಂದು ಕೊರತೆಗಳನ್ನು ಬಗೆಹರಿಸಲು ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೆಸ್ಕಾಂ, ಶಿವಮೊಗ್ಗ ರವರ ಅಧ್ಯಕ್ಷತೆಯಲ್ಲಿ " ಜನಸಂಪರ್ಕ ಸಭೆ " ಯನ್ನು ಆಯೋಜಿಸಲಾಗಿತ್ತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು :-**

1. ಶ್ರೀ ಶಶಿಧರ್, ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಶಿವಮೊಗ್ಗ
2. ಶ್ರೀ ಇಂಧುದರ್. ಆರ್. ಕಾರ್ಯನಿರ್ವಾಹಕ ಇಂಜಿನಿಯರ್(ವಿ)
3. ಶ್ರೀ ವಸಂತ.ಎಸ್.ಕೂಲೇರ, ಸಹಾಯಕ ಇಂಜಿನಿಯರ್(ತಾಂತ್ರಿಕ), (ಪ್ರಭಾರ)
4. ಶ್ರೀ ತಿಮ್ಮಪ್ಪ. ಸಹಾಯಕ ಇಂಜನಿಯರ್(ವಿ), ಕವಿಪ್ರನಿನಿ., ಶಿಕಾರಿಪುರ
5. ಶ್ರೀ ಧನಂಜಯ. ಜೆ, ಸಹಾಯಕ ಲೆಕ್ಕಾಧಿಕಾರಿ (ಪ್ರಭಾರ)
6. ಶ್ರೀ ರಾಜು. ಬಿ., ಕಿರಿಯ ಇಂಜಿನಿಯರ್(ವಿ), ಈಸೂರು ಶಾಖೆ
7. ಶ್ರೀ ಅಶೋಕ್ ಕುಮಾರ್, ಕಿರಿಯ ಇಂಜಿನಿಯರ್(ವಿ) ಹೊಸೂರು ಶಾಖೆ
8. ಶ್ರೀ ಹನುಮಂತ ನಾಯ್ಕ. ಜಿ. ಸ.ಇಂ(ವಿ) (ಪ್ರಭಾರ) ಪಟ್ಟಣ ಶಾಖೆ
9. ಶ್ರೀ ಕಿರಣ್ ಕುಮಾರ್. ಜಿ. ಮೇಲ್ವಿಚಾರಕ, ಕಾಮಗಾರಿ ಘಟಕ.
10. ಶ್ರೀ ಹರೀಶ್, ಕಿ.ಇಂ(ವಿ), 24*7 ಸೇವಾ ಕೇಂದ್ರ

**ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ಸ್ವೀಕರಿಸಲಾದ ದೂರುಗಳು :-**

1. ಶ್ರೀ ಜಯಲಿಂಗಪ್ಪ, ಸೊಪ್ಪಿನ ಕೇರಿ, ಶಿಕಾರಿಪುರ ರವರು ಸದರಿಯವರ ಗೃಹಬಳಕೆ ಸ್ಥಾವರದ ಹೆಸರು ಬದಲಾವಣೆ ಮಾಡುವ ಕುರಿತು ಮಾಹಿತಿ ಕೋರಿರುತ್ತಾರೆ. ಸದರಿಯವರಿಗೆ ಮಾಹಿತಿ ನೀಡಲಾಯಿತು.

2. ಶ್ರೀ ಯಲ್ಲಪ್ಪ, ಶಿವಾಜಿಕಣಿಯಾ ಎಂಬುವವರು, ಜಿ.ಎಸ್.ಎಂ. ಅಡಿಯಲ್ಲಿ ನೀರಾವರಿ ಪಂಪುಸೆಟ್‌ಗೆ ವಿದ್ಯುತ್ ಸಂಪರ್ಕ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಕಾಮಗಾರಿ ಮುಕ್ತಾಯಗೊಂಡಿದ್ದು, ಪರಿವರ್ತಕ ಒದಗಿಸಿಲ್ಲ ಎಂದು ಕೇಳಿರುತ್ತಾರೆ. ಪರಿವರ್ತಕಗಳ ಲಭ್ಯತೆಯನುಸಾರ ಒದಗಿಸಲಾಗುವುದು ಎಂದು ತಿಳಿಸಲಾಯಿತು.

3. ಶ್ರೀ ಪ್ರಸನ್ನ. ಎಂಬುವವರು ಸದರಿಯವರ ಜಿ.ಎಸ್.ಎಂ., ಆರ್.ಆರ್. ಸಂಖ್ಯೆಗೆ ಅಳವಡಿಸಿರುವ ಪರಿವರ್ತಕ ಓವರ್ ಲೋಡ್ ಆಗಿದ್ದು, ಹೆಚ್ಚುವರಿಯಾಗಿ ಪರಿವರ್ತಕ ಒದಗಿಸುವಂತೆ ಕೋರಿರುತ್ತಾರೆ. ಸದರಿ ಸ್ಥಳದಲ್ಲಿರುವ ಅನಧಿಕೃತ ನೀರಾವರಿ ಪಂಪುಸೆಟ್‌ಗಳಿಗೆ ಕಂಪನಿಯ ನಿಯಮಾನುಸಾರ ಹಣ ಪಾವತಿಸಿದಲ್ಲಿ ಪರಿವರ್ತಕ ಒದಗಿಸಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲಾಗುವುದು ಎಂದು ತಿಳಿಸಲಾಯಿತು.

4. ಅಶೋಕ್, ಮತ್ತಿಘಟ್ಟ ಎಂಬುವವರು ಜಿ.ಎಸ್.ಎಂ. ಅಡಿಯಲ್ಲಿ ನೀರಾವರಿ ಪಂಪುಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ ಮುಕ್ತಾಯಗೊಂಡಿದ್ದು, ಪರಿವರ್ತಕ ಒದಗಿಸಿಲ್ಲ ಎಂದು ಕೇಳಿರುತ್ತಾರೆ. ಪರಿವರ್ತಕಗಳ ಲಭ್ಯತೆಯನುಸಾರ ಒದಗಿಸಲಾಗುವುದು ಎಂದು ತಿಳಿಸಲಾಯಿತು.

5. ದರ್ಶನ್ ಉಳ್ಳಿ, ಶಿಕಾರಿಪುರ ಎಂಬುವವರು ಅಂಜನಾಪುರ ಜಾಕ್‌ವೆಲ್‌ನಲ್ಲಿ ಪದೇ ಪದೇ ವಿದ್ಯುತ್ ಅಡಚಣೆ ಉಂಟಾಗುತ್ತಿದ್ದು, ಜಾಕ್‌ವೆಲ್ ಫೀಡರ್‌ಗೆ ಪ್ರತ್ಯೇಕ ಮಾರ್ಗ ರಚಿಸುವಂತೆ ಕೋರಿರುತ್ತಾರೆ. ಈ ಕುರಿತು ಶಾಖಾಧಿಕಾರಿ, ಈಸೂರು ಶಾಖೆ ರವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸುವಂತೆ ಸೂಚಿಸಲಾಯಿತು.

6. ಮಾಲತೇಶ್, ಶಿಕಾರಿಪುರ ಎಂಬುವವರ ನೀರಾವರಿ ಪಂಪುಸೆಟ್ ಸ್ಥಾವರಕ್ಕೆ ಶೀಘ್ರ ಸಂಪರ್ಕ ಯೋಜನೆಯಡಿ ಕಾಮಗಾರಿ ಪೂರ್ಣಗೊಂಡಿದ್ದು, ಪರಿವರ್ತಕ ಒದಗಿಸುವಂತೆ ಕೋರಿರುತ್ತಾರೆ. ಪರಿವರ್ತಕಗಳ ಲಭ್ಯತೆಯನುಸಾರ ಒದಗಿಸಲಾಗುವುದು ಎಂದು ತಿಳಿಸಲಾಯಿತು.

ಸಹಿ/-

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ&ಪಾ ಉಪವಿಭಾಗ, ಮೆಸ್ಕಾಂ, ಶಿಕಾರಿಪುರ

**ಪ್ರತಿಯನ್ನು :-**

1) ಗೌರವಪೂರ್ವಕ ಮಾಹಿತಿಗಾಗಿ, ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಮೆಸ್ಕಾಂ, ಶಿವಮೊಗ್ಗ
2) ಗೌರವಪೂರ್ವಕ ಮಾಹಿತಿಗಾಗಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ವಿಭಾಗ, ಮೆಸ್ಕಾಂ, ಶಿಕಾರಿಪುರ
3) ಸಹಾಯಕ ಲೆಕ್ಕಾಧಿಕಾರಿ, ಕಾ & ಪಾ ಉಪವಿಭಾಗ, ಮೆಸ್ಕಾಂ, ಶಿಕಾರಿಪುರ
4) ಶಾಖಾಧಿಕಾರಿಗಳು /ಪಟ್ಟಣ/ಗ್ರಾಮಾಂತರ/ಹೊಸೂರು/ಈಸೂರು
5) ಕಛೇರಿ ಕಡತ

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
MESCOM
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ದೂರವಾಣಿ ಸಂಖ್ಯೆ: 08187-
ಕಾರ್ಯ ಮತ್ತು ಪಾಲನೆ ಉಪ-ವಿಭಾಗ
ಮವಿಸಕಂ ಶಿರಾಳಕೊಪ್ಪ
ಇ-ಮೇಲ್ ವಿಳಾಸ: [illegible]
ನೋಂದಾಯಿತ ಕಛೇರಿ : "ಮೆಸ್ಕಾಂ ಭವನ", ಕಾವೂರು ಅಡ್ಡರಸ್ತೆ, ಬಜ್ಪೆ, ಮಂಗಳೂರು-575 004.
ಕಾರ್ಪೋರೇಟ್ ಐಡೆಂಟಿಟಿ ನಂಬರ್ : (CIN) [illegible]0109 [illegible] 2002 SGC 030425. ವೆಬ್ ಸೈಟ್ ವಿಳಾಸ :

ಕ್ರಮಾಂಕ: ಸಕಾನಿಇಂ(ವಿ)/ಸಇಂ(ತಾ)/2023-24/ 947 ದಿನಾಂಕ: 28/06/2023

## "ಜನ ಸಂಪರ್ಕ ಸಭೆಯ ಸಭಾ ನಡಾವಳಿ"

ದಿನಾಂಕ 14.06.2023 ರಂದು ಬೆಳಗ್ಗೆ 10:30 ಗಂಟೆಗೆ ಶಿರಾಳಕೊಪ್ಪ ಉಪ-ವಿಭಾಗದ ಕಛೇರಿಯ ಸಭಾಂಗಣದಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ಶಿವಮೊಗ್ಗ ಇವರ ಅದ್ಯಕ್ಷತೆಯಲ್ಲಿ ನಡೆಸಲಾದ ಜನ ಸಂಪರ್ಕ ಸಭೆಯ ನಡಾವಳಿಕೆಗಳು.

**ಹಾಜರಿದ್ದವರು:-**

| ಕ್ರ.ಸಂ | ಹೆಸರು ಶ್ರೀಯುತರು/ಶ್ರೀಮತಿ | ಪದನಾಮ ಮತ್ತು ಕಛೇರಿ |
|---|---|---|
| 1 | ಶ್ರೀ ಶಶೀಧರ್ | ಅಧೀಕ್ಷಕ ಇಂಜಿನಿಯರ್(ವಿ) |
| 2 | ಶ್ರೀ ಆರ್. ಇಂದೂಧರ್ | ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 3 | ಶ್ರೀ ಪ್ರವೀಣ್.ಎ.ಎಮ್. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) |
| 4 | ಶ್ರೀ ಪ್ರಕಾಶ್ ಹುಚ್ಚಯ್ಯ | ಸಹಾಯಕ ಲೆಕ್ಕಾಧಿಕಾರಿ |
| 5 | ಶ್ರೀ ಭೀಮಪ್ಪ | ಸಹಾಯಕ ಇಂಜಿನಿಯರ್(ವಿ) ಪ್ರಭಾರಿ |
| 6 | ಶ್ರೀ ಬಾಲರಾಜ ಯಳ್ಳೂರು | ಕಿರಿಯ ಇಂಜಿನಿಯರ್(ವಿ) ತೊಗರ್ಸಿ |
| 7 | ಶ್ರೀ ರವಿರಾಥೋಡ್ | ಕಿರಿಯ ಇಂಜಿನಿಯರ್(ವಿ) ಸುಣ್ಣದಕೊಪ್ಪ |
| 8 | ಶ್ರೀ ಹರೀಶ್ ಅಗ್ರಹಾರಮುಚಡಿ | ಗ್ರಾಹಕರು |
| 9 | ಶ್ರೀ ಮಹೇಶಪ್ಪ.ಪಿ.ಬಿ ಅಗ್ರಹಾರಮುಚಡಿ | ಗ್ರಾಹಕರು |
| 10 | ಶ್ರೀ ನಾಗರಾಜಪ್ಪ ಅಗ್ರಹಾರಮುಚಡಿ | ಗ್ರಾಹಕರು |
| 11 | ಶ್ರೀ ಲೋಕಪ್ಪ ನಾಗೀಹಳ್ಳಿ | ಗ್ರಾಹಕರು |
| 12 | ಶ್ರೀ ಹೋಳಪ್ಪ ತಡಗಣಿ | ಗ್ರಾಹಕರು |
| 13 | ಶ್ರೀ ಮಹೇಶ್ ಬಿ.ಪಿ ತಾಳಗುಂದ | ಗ್ರಾಹಕರು |
| 14 | ಶ್ರೀ ಬಾಷಾ ಸಾಬ್ ಚಿಕ್ಕಜಂಬೂರು | ಗ್ರಾಹಕರು |

Scanned with OKEN Scanner

ಈ ಸಭೆಗೆ ಹಾಜರಾದ ವಿವರಗಳು ಈ ಕೆಳಗಿನಂತಿವೆ.

ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ ಶಿವಮೊಗ್ಗ ರವರು ಅಧ್ಯಕ್ಷತೆಯನ್ನು ವಹಿಸಿದ್ದು, ಸದರಿಯವರಿಗೆ ಸಭೆಗೆ ಗೌರವಾನ್ವಿತವಾದ ಸ್ವಾಗತವನ್ನು ಎಲ್ಲಾ ಅಧಿಕಾರಿ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕೋರಿದರು ಹಾಗೂ ಸಭೆಗೆ ಆಗಮಿಸಿದ ಸಹಾಯಕ ಕಾರ್ಯನಿವಾಹಕ ಇಂಜಿನಿಯರ್(ವಿ),ಸಹಾಯಕ ಇಂಜಿನಿಯರ್(ವಿ)/(ತಾಂ) ಸಹಾಯಕ ಲೆಕ್ಕಾಧಿಕಾರಿಗಳಗೂ/ ಕಿರಿಯ ಇಂಜಿನಿಯರ್(ವಿ)ಗಳಗೆ ಹಾಗೂ ಸಭೆಗೆ ಹಾಜರಿದ ಗ್ರಾಹಕರಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ವಾಗತವನ್ನು ಕೋರುವ ಮೂಲಕ ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ಗ್ರಾಹಕರು/ಸಾರ್ವಜನಿಕರು ನೀಡಿರುವ ದೂರುಗಳು ಹಾಗೂ ಚರ್ಚಿಸಲಾದ ವಿಷಯಗಳು:**

- **ಶ್ರೀ ಹರೀಶ್ ಅಗ್ರಗಾರಮುಚಡಿ (9980744852):** "ಜನ ಸಂಪರ್ಕ ಸಭೆಗೆ ಇರುವ ಬಗ್ಗೆ ಮಾಹಿತಿಯನ್ನು ಗ್ರಾಮ ಪಂಚಾಯ್ತಿಯ ನೋಟಿಸ್ ಬೋರ್ಡ್ ನಮೂದಿಸಲು ಕೋರಿದ್ದು, ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯ್ತಿ ಕಾರ್ಯಾಲಯದಲ್ಲಿ "ನೋಟಿಸ್ ಬೋರ್ಡ್"ನಲ್ಲಿ ಮಾರ್ಗದಾಳುಗಳ ನಮೂದಿಸಿ ನೋಟ್ ಕ್ಯಾಮ್ ಮೋಟೋ ತರಿಸಲು ಶಾಖಾಧಿಕಾರಿಗಳಗೆ ತಿಳಸಲಾಯಿತು.

- **ಶ್ರೀ ಹರೀಶ್ ಅಗ್ರಗಾರಮುಚಡಿ(9980744852):** ಅಗ್ರಹಾರಮುಚಡಿ ಗ್ರಾಮಕ್ಕೆ 3ಫೇಸ್ ವೋಲ್ಟೇಜ್ ಸಮಸ್ಯೆ ಬರುತ್ತಿದೆ ಎಂದು ತಿಳಸಿರುತ್ತಾರೆ.

  ಸದರಿ ಗ್ರಾಮಕ್ಕೆ ಅನುಕೂಲವಾಗುವಂತೆ, ಹೊಸ ಫೀಡರ್‌ಗೆ ಅಂದಾಜು ಪಟ್ಟಿ ತಯಾರಿಸಲು ಕ್ರಮಕೈಗೊಳ್ಳಲು ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಸಲಾಯಿತು.

- **ಶ್ರೀ ಹರೀಶ್ ಅಗ್ರಗಾರಮುಚಡಿ(9980744852):** ಅಗ್ರಹಾರಮುಚಡಿ ಗ್ರಾಮದ ಹೆಚ್.ಟಿ/ಎಲ್.ಟಿ ಮಾರ್ಗದ ವಾಹಕ ತುಂಬಾ ಹಳೆಯದಾಗಿದ್ದು ವಾಹಕವನ್ನು ಬದಲಾವಣೆ ಮಾಡಿಕೊಡಿ ಎಂದು ಕೋರಿರುತ್ತಾರೆ.

  ಸದರಿ ಕಾಮಗಾರಿಗಳಗೆ ಈಗಾಲೇ ಯುನಿಕ್ ಐ.ಡಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲಾಗಿದೆ. ಎಂದು ಕಿರಿಯ ಇಂಜಿನಿಯರ್(ವಿ) ರವರು ತಿಳಸಿರುತ್ತಾರೆ.

- **ಶ್ರೀ ಹೋಳೆಯಪ್ಪ (9900912537) :** ಆರ್.ಆರ್.ಸಂಖ್ಯೆ TDIP:9454 ಅಕ್ರಮ-ಸಕ್ರಮ ಯೋಜನೆಯಲ್ಲಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಿ ಕೊಡಬೇಕಾಗಿ ಈ ಮೂಲಕ ಕೋರಲಾಗಿದೆ

Scanned with OKEN Scanner

ಸದರಿ ಕಾಮಗಾರಿಗೆ ಡಿ.ಪಿ.ಆರ್ ಸಲ್ಲಿಸಲಾಗಿದೆ. ಮಂಜೂರಾತಿ ದೊರೆತ ತಕ್ಷಣ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳಲಾಗುವುದು ಎಂದು ಸಹಾಯಕ ಇಂಜಿನಿಯರ್(ವಿ) ಗ್ರಾಮಾಂತರ ಶಾಖೆ ರವರು ತಿಳಿಸಿರುತ್ತಾರೆ.

- **ಶ್ರೀ. ಹರೀಶ್ ಅಗ್ರಹಾರಮುಚಡಿ(9980744852):** ಅಗ್ರಹಾರಮುಚಡಿ ಭಾಗದ ಗ್ರಾಮಗಳಿಗೆ ಅನುಕೂಲವಾಗುವಂತೆ ಹೊಸದಾಗಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಕೋರಿರುತ್ತಾರೆ.

ಸದರಿ ಗ್ರಾಮಗಳಿಗೆ ಸಮರ್ಪಕ ವಿದ್ಯುತ್ ವಿತರಣೆ ಮಾಡಲು ಶಿರಾಳಕೊಪ್ಪ ಉಪವಿಭಾಗ ವ್ಯಾಪ್ತಿಯಲ್ಲಿ ಹೊಸದಾಗಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆಗೆ ಸೂಕ್ತವಾದಂತಹ ಸ್ಥಳವನ್ನು ಪರಿಶೀಲನೆ ನಡೆಸಿ ಪ್ರಸ್ತಾವನೆಯನ್ನು ವಿಭಾಗ ಕಛೇರಿಗೆ ಸಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) /ಶಾಖಾಧಿಕಾರಿಗಳಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ ಎಲ್ಲರಿಗೂ ವಂದನೆಯನ್ನು ಸಲ್ಲಿಸಿ ಸಭೆಯನ್ನು ಸಂಜೆ 5.30ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾ&ಪಾ ಉಪ-ವಿಭಾಗ ಮೆಸ್ಕಾಂ., ಶಿರಾಳಕೊಪ್ಪ
28/6

ಪ್ರತಿಗಳು:-

1) ಗೌರವಪೂರ್ವಕ ಮಾಹಿತಿಗಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ).ಕಾ & ಪಾ ವಿಭಾಗ, ಮೆಸ್ಕಾಂ, ಶಿಕಾರಿಪುರ.
2) ಕಛೇರಿ ಪ್ರತಿ

Scanned with OKEN Scanner

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನೋಂದಾಯಿತ ಕಛೇರಿ:
'ಮೆಸ್ಕಾಂ ಭವನ' ಕಾವೂರು ಅಡ್ಡ ರಸ್ತೆ, ಬಿಜೈ,
ಮಂಗಳೂರು–575004Corporate Identy Number:(CIN) U40109 KA 2002 SGC 030425.
Web add: www.mesco.in

ಸಹಾಯಕಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನೆ ಉಪ ವಿಭಾಗ
ಮವಿಸಕಂ ಆನವಟ್ಟಿ–577413
ದೂರವಾಣಿ ಸಂಖ್ಯೆ: 267222
E-MailID:aeeavt@rediffmail.com


ಕ್ರಮಾಂಕ: ಸ.ಕಾ.ನಿ.ಇಂ.(ವಿ)/ಸ.ಇಂ(ತಾಂ)/23–24/ 812-13 ದಿನಾಂಕ: 9-6-2023

## : ಜನ ಸಂಪರ್ಕ ಸಭೆಯ ನಡಾವಳಿಗಳು:

**ದಿನಾಂಕ: 03-06-2023 ರಂದು ಬೆಳಗ್ಗೆ 11:00 ಗಂಟೆಗೆ ಆನವಟ್ಟಿ ಉಪ-ವಿಭಾಗ ಕಛೇರಿಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.**

ಸಭೆಗೆಹಾಜರಿದ್ದ ಅಧಿಕಾರಿ /ನೌಕರರು ಗ್ರಾಹಕರು

| ಕ್ರ.ಸಂ | ಹಾಜರಿದ್ದವರು | ಪದನಾಮ ಮತ್ತು ಕಛೇರಿ |
|---|---|---|
| ಅಧಿಕಾರಿಗಳು/ನೌಕರರು | | |
| 01 | ಶ್ರೀ ಶಶಿಧರ ಆರ್ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಮೆಸ್ಕಾಂ., ಶಿವಮೊಗ್ಗ |
| 02 | ಶ್ರೀ ಇಂದುಧರ ಆರ್ | ಮಾನ್ಯ ಕಾರ್ಯಪಾಲಕ ಇಂಜಿನಿಯರ್(ವಿ) ಮೆಸ್ಕಾಂ., ಶಿಕಾರಿಪುರ |
| 03 | ಶ್ರೀ ಪ್ರವೀಣ ಎಮ್ | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಆನವಟ್ಟಿ. |
| 04 | ಶ್ರೀ ಸಂದೀಪ್ ಜಿ | ಸಹಾಯಕ ಇಂಜಿನಿಯರ್(ತಾಂ) ಪ್ರಭಾರ ಆನವಟ್ಟಿ/ ಕಿ.ಇಂ(ವಿ) ಭಾರಂಗಿ |
| 05 | ಶ್ರೀ ಬಾಳಪ್ಪ ನಗರಾಳ | ಸಹಾಯಕ ಇಂಜಿನಿಯರ್(ವಿ) (ಪ್ರ)ಆನವಟ್ಟಿ ಶಾಖೆ |
| 06 | ಶ್ರೀ ಲಕ್ಷ್ಮಣ ಹೆಚ್.ಎನ್ | ಕಿರಿಯಇಂಜಿನಿಯರ್(ವಿ) ಕುಪ್ಪಗಡ್ಡೆ ಶಾಖೆ |
| 07 | ಶ್ರೀಪ್ರವೀಣ ಕುಮಾರ್ ಕೆ. | ಕಿರಿಯಇಂಜಿನಿಯರ್(ವಿ) ಜಡೆಶಾಖೆ |
| ಗ್ರಾಹಕರು | | |
| 1. | ಶ್ರೀ ಮಲ್ಲಿಕಾರ್ಜುನ | ಮೂಡಿ ದೊಡ್ಡಿಕೊಪ್ಪ ಗ್ರಾಮ |
| 2. | ಶ್ರೀ ಶಿವರುದ್ರಪ್ಪ ಬಿನ್ ಈರಪ್ಪ | ಲಕ್ಕವಳ್ಳಿ ಗ್ರಾಮ |
| 3. | ಶ್ರೀ ಸಂತೋಷ್ | ಲಕ್ಕವಳ್ಳಿ ಗ್ರಾಮ |
| 4. | ಶ್ರೀ ವಿಕಾಸ್ | ಲಕ್ಕವಳ್ಳಿ ಗ್ರಾಮ |
| 5. | ಶ್ರೀ ವಿಜಯ | ಲಕ್ಕವಳ್ಳಿ ಗ್ರಾಮ |
| 6. | ಶ್ರೀ ಪ್ರಭು | ಲಕ್ಕವಳ್ಳಿ ಗ್ರಾಮ |
| 7. | ಶ್ರೀ ವೆಂಕಟೇಶ ಕಾಮತ್ | ಕೆರೆಹಳ್ಳಿ ಗ್ರಾಮ |
| 8. | ಶ್ರೀ ವಿಶ್ವನಾಥ್ ನಾಡಿಗೇರ್ | ಕೆರೆಹಳ್ಳಿ ಗ್ರಾಮ |
| 9. | ಶ್ರೀ ದುರ್ಗಪ್ಪ | ಟಿ.ಜಿ ಕೊಪ್ಪ ಗ್ರಾಮ |



Scanned with CamScanner

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಮತ್ತು ಸ್ವೀಕರಿಸಲಾದ ಅವಹಾಲುಗಳು**

| ಕ್ರಮ ಸಂಖ್ಯೆ | ದೂರುದಾರರ ಹೆಸರು/ವಿಳಾಸ | ಅಹವಾಲು | ಕೈ ಗೊಂಡ ಕ್ರಮ |
|---|---|---|---|
| 01 | ಶ್ರೀ ಮಲ್ಲಿಕಾರ್ಜುನ, ಮೂಡಿ ದೊಡ್ಡಿಕೊಪ್ಪ ಗ್ರಾಮ | ಅಕ್ರಮ ಸಕ್ರಮ ಯೋಜನೆ ಅಡಿ ನಿರ್ವಹಿಸಿದ ಕಾಮಗಾರಿಗೆ ಗುತ್ತಿಗೆ ದಾರರಾದ ಪ್ರದೀಪರವರು ಪರಿವರ್ತಕ ಅಳವಡಿಸಿರುವುದಿಲ್ಲ ಎಂದು ಸೂಚಿಸಿದರು | ಆದ್ಯತೆ ಮೇರೆಗೆ ಪರಿವರ್ತಕವನ್ನು ವಿತರಿಸಲಾಗುವುದೆಂದು ಸೂಚಿಸಲಾಯಿತು |
| 02 | ಶ್ರೀ ಶಿವರುದ್ರಪ್ಪ ಬಿನ್ ಈರಪ್ಪ, ಲಕ್ಕವಳ್ಳಿ ಗ್ರಾಮ | ಅಕ್ರಮ ಸಕ್ರಮ ಯೋಜನೆ ಅಡಿ ನಿರ್ವಹಿಸಿದ ಕಾಮಗಾರಿಗೆ ಗುತ್ತಿಗೆ ದಾರರಾದ ಪ್ರದೀಪರವರು ಪರಿವರ್ತಕ ಅಳವಡಿಸಿರುವುದಿಲ್ಲ ಎಂದು ಸೂಚಿಸಿದರು | ಆದ್ಯತೆ ಮೇರೆಗೆ ಪರಿವರ್ತಕವನ್ನು ವಿತರಿಸಲಾಗುವುದೆಂದು ಸೂಚಿಸಲಾಯಿತು |
| 03 | ಶ್ರೀ ಸಂತೋಷ್ , ಲಕ್ಕವಳ್ಳಿ ಗ್ರಾಮ | ಸುಮಾರು 15 ದಿನಗಳಿಂದ ಇಂವರುಗಳಿಗೆ ಹೋಗಿರುವ ಎಲ್.ಟಿ ಮಾರ್ಗದಲ್ಲಿ ಕರೆಂಟ್ ಇರುವುದಿಲ್ಲ ಸರಿ ಪಡಿಸಿ ಕೊಡಲು ಮನವಿ ಸಲ್ಲಿಸಿದರು | ಕೂಡಲೇ ಕ್ರಮವಹಿಸಿ ಸರಿ ಪಡಿಸುವಂತೆ ಶಾಖಾಧಿಕಾರಿ ಆನವಟ್ಟಿ ರವರಿಗೆ ಸೂಚಿಸಿದರು ಮತು ರೈತರಿಗೆ ಮತ್ತು ಗ್ರಾಹಕರಿಗೆ ತೊಂದರೆ ಆಗದ ಹಾಗೆ ಸೂಕ್ತ ಕ್ರಮವಹಿಸಲು ಹಾಗೂ ದಿನದ 07 ತಾಸು 3 ಫೇಸ್ ಕರೆಂಟ್ ನೀಡಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಆನವಟ್ಟಿ ರವರಿಗೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಶಿವಮೊಗ್ಗ ರವರು ಸೂಚಿಸಿದರ್ರು |
| 04 | ಶ್ರೀ ವಿಕಾಸ್, ಲಕ್ಕವಳ್ಳಿ ಗ್ರಾಮ | | |
| 05 | ಶ್ರೀ ವಿಜಯ, ಲಕ್ಕವಳ್ಳಿ ಗ್ರಾಮ | | |
| 06 | ಶ್ರೀ ಪ್ರಭು, ಲಕ್ಕವಳ್ಳಿ ಗ್ರಾಮ | | |
| 07 | ಶ್ರೀ ವೆಂಕಟೇಶ ಕಾಮತ್, ಕೆರೆಹಳ್ಳಿ ಗ್ರಾಮ | ಯು.ಜಿ ಕೇಬಲ್ ಅಳವಡಿಸಿ ಸದರಿ ರವರ ಹೆಚ್,ಟಿ ಸ್ಥಾವರಕ್ಕೆ ಸಂಪರ್ಕ ನೀಡುವಂತೆ ಕೋರಿಕೆ ಸಲ್ಲಿಸಿದರು | ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಿಕೊಳ್ಳಲು ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಶಿಕಾರಿಪುರ ರವರು ಸೂಚಿಸಿದರು |
| 08 | ಶ್ರೀ ವಿಶ್ವನಾಥ್ ನಾಡಿಗೇರ್ , ಕೆರೆಹಳ್ಳಿ ಗ್ರಾಮ | ಹೆಚ್.ಟಿ ಸ್ಥಾವರಕ್ಕೆ ಹೋಗಿರುವ ಮಾರ್ಗದಿಂದ ದೇವಸ್ಥಾನದ ಕಲ್ಯಾಣ ಮಂಟಪಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮನವಿ ಸಲ್ಲಿಸಿದರು | ಕೂಡಲೇ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈ ಗೊಳ್ಳಲು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಶಿವಮೊಗ್ಗ ರವರು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಮೆಸ್ಕಾಂ., ಆನವಟ್ಟಿ ರವರಿಗೆ ಸೂಚಿಸಿದರು. |

Scanned with CamScanner

| | | | |
|---|---|---|---|
| 09 | ಶ್ರೀ ದುರ್ಗಪ್ಪ, ಟಿ.ಜಿ ಕೊಪ್ಪ | ಜಿ.ಎಸ್.ಎಮ್ ಯೋಜನೆ ಅಡಿಯಲ್ಲಿ ಕಾಮಗಾರಿ ನಿರ್ವಹಿಸಿಕೊಂಡಿದ್ದು, ಪರಿವರ್ತಕ ಹಾಕಿರುವುದಿಲ್ಲ ಪರಿವರ್ತಕ ನೀಡುವಂತೆ ಸೂಚಿಸಿದರು | ಆದ್ಯತೆ ಮೇರೆಗೆ ಪರಿವರ್ತಕವನ್ನು ವಿತರಿಸಲಾಗುವುದೆಂದು ಸೂಚಿಸಲಾಯಿತು |

ಸಹಾಯಕಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪವಿಭಾಗ
ಮ.ವಿ.ಸ.ಕಂ, ಆನವಟ್ಟಿ

ಸಹಾಯಕ ಕಾರ್ಯ ನಿರ್ವಾಹಕ ಇಂಜನಿಯರ (ವಿ)
ಮಂ.ವಿ.ಸರಬರಾಜು ಕಂಪನಿ (ನಿ.)
ಆನವಟ್ಟಿ ಉಪ ವಿಭಾಗ

**ಪ್ರತಿಗಳು:**

1. ಗೌರವಪೂರ್ವಕವಾಗಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ವೃತ್ತ ಕಛೇರಿ ಮ.ವಿ.ಸ.ಕಂ ಶಿವಮೊಗ್ಗ. ರವರ ದಿವ್ಯ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಗೌರವಪೂರ್ವಕವಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನಾ, ವಿಭಾಗ ಮ.ವಿ.ಸ.ಕಂ ಶಿಕಾರಿಪುರ ರವರ ದಿವ್ಯ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಶಾಖಾಧಿಕಾರಿಗಳು, ಆನವಟ್ಟಿ/ಭಾರಂಗಿ/ಜಡೆ/ಕುಪ್ಪಗಡ್ಡೆ ರವರ ಮಾಹಿತಿಗಾಗಿ.
4. ಕಛೇರಿ ಪ್ರತಿ/ಮು.ಖ



Scanned with CamScanner